ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	492
ಸದಸ್ಯರ ಹೆಸರು	:	ಶ್ರೀ ಅ.ದೇವೆಗೌಡ (ಪದವಿಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	23/07/2019
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನ ವಿಕಾಸ ಸೌಧದಲ್ಲಿರುವ ಸರ್ಕಾರಿ ಮುದ್ರಣಾಲಯದ ಘಟಕದಲ್ಲಿ ಕಳೆದ 20ಕ್ಕೂ ಹೆಚ್ಚು ವರ್ಷಗಳಿಂದ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡಿ.ಟಿ.ಪಿ ಆಪ್‌ರೇಟರ್‌ಗಳ ವಿವರ ಒದಗಿಸುವುದು;	ಮಾಹಿತಿಯನ್ನು ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ.
ಆ)	ಕೇವಲ ಬೆರಳಣಿಕೆಯಷ್ಟು ಇರುವ ಸದರಿ ನೌಕರರು ಸರ್ಕಾರಿ ಸೇವೆಗೆ ಸೇರುವ ವಯೋಮಿತಿ ಮೀರಿದ್ದು; ಯಾವುದೇ ಸೇವಾ ಭದ್ರತೆ ಇಲ್ಲದೆ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಇವರಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಈ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ನಿಯಮಾನುಸಾರ ಅನ್ವಯವಾಗುವ ಕನಿಷ್ಠ ವೇತನ ದರಗಳಿಗನುಗುಣವಾಗಿ ಮಜೂರಿಯನ್ನು ನೀಡಲಾಗುತ್ತಿದ್ದು, ಇದರೊಂದಿಗೆ ಅನ್ವಯವಾಗುವ ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯಗಳನ್ನು ಸಹ ನೀಡಲಾಗುತ್ತಿರುತ್ತದೆ. ಇದರ ಹೊರತಾಗಿ ಯಾವುದೇ ಸೌಲಭ್ಯಗಳನ್ನು ಸದರಿ ನೌಕರರಿಗೆ ವಿಸ್ತರಿಸುವ ಬಗ್ಗೆ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಇ)	ಇವರಿಗೆ ಸೇವಾ ಭದ್ರತೆ ಮತ್ತು ಸೂಕ್ತ ವೇತನವನ್ನು ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ : ಇಡಿ 11916 ಇಎಸ್‌ಡಬ್ಲ್ಯೂ 2019

ಎಸ್.ಸುರೇಶ್ ಕುಮಾರ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಅನುಬಂಧ - 1

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯಲ್ಲಿ ಪ್ರಸ್ತುತ ಲಭ್ಯವಿರವ ದಾಖಲೆಗಳನ್ವಯ ಪರಿಶೀಲಿಸಲಾಗಿ ಸರ್ಕಾರಿ ವಿಕಾಸಸೌಧ ಘಟಕವು 2007ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಇಲ್ಲಿ ಪ್ರಮುಖವಾಗಿ ನಿರ್ವಹಿಸುವ ಡಿ.ಟಿ.ಪಿ. ಕಾರ್ಯಗಳಿಗೆ ಸಿಬ್ಬಂದಿ ಕೊರತೆ ಇದ್ದ ಕಾರಣ ನಿಯಮಾನುಸಾರ ಟೆಂಡರ್ ಕರೆದು ವಿಜೇತ ಸಂಸ್ಥೆಗಳಿಂದ ತುಂಡು ಗುತ್ತಿಗೆ ಆಧಾರದ ಮೇಲೆ ಡಿ.ಟಿ.ಪಿ. ಕೆಲಸಗಳನ್ನು ನಿರ್ವಹಿಕೊಳ್ಳಲಾಗುತ್ತಿತ್ತು. ನಂತರದಲ್ಲಿ ತುಂಡು ಗುತ್ತಿಗೆ ಪದ್ಧತಿಯ ಬದಲಾಗಿ ಮಾಡಿ 2014-15ನೇ ಸಾಲಿನಿಂದ ನಿಯಮಾನುಸಾರ ಟೆಂಡರ್ ಕರೆದು ಮಾನವ ಶಕ್ತಿ ಸೇವೆಯನ್ನು ಪಡೆಯಲಾಗಿರುತ್ತದೆ.

ಈ ಹಿಂದೆ ಕಾರ್ಯ ನಿರ್ವಹಿಸಿದ ಹಾಗೂ ಪ್ರಸುತ್ತ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ಪಟ್ಟಿ ಈ ಮುಂದಿನಂತಿರುತ್ತದೆ.

Sl. No.	Name	Designation	Aug 2010	2011	2012	2013	2014	2015	2016	2017	2018	2019	Remarks
1	Vijay Kumar B V	DTP Operator	✔	✔	✔	✔	✔	✔	✔	✔	✔	✔	
2	Anil Kumar B A	DTP Operator	✔	✔	✔	✔	-	-	-	-	-	-	Worked upto Jan 2013
3	Shivakumar A N	DTP Operator	✔	✔	✔	✔	✔	✔	✔	✔	✔	✔	
4	Theja P	DTP Operator	✔	✔	✔	✔	✔	✔	✔	✔	✔	✔	
5	Mohan Raj J	DTP Operator	✔	✔	✔	-	-	-	-	-	-	-	Worked up to Nov 2012
6	Annapurna A	DTP Operator	✔	✔	✔	✔	✔	✔	✔	✔	✔	-	Worked up to Nov 2018
7	Ravi Kumar B M	DTP Operator	✔	-	-	-	-	-	-	-	-	-	Worked up to Nov 2010
8	Shiva Kumar B V	DTP Operator	✔	✔	-	-	-	-	-	-	-	-	Worked up to Oct 2011
9	Kamalamma	DTP Operator	✔	✔	-	-	-	-	-	-	-	-	Worked upto Sep 2011
10	Asha B P	DTP Operator	✔	✔	✔	-	-	-	-	-	-	-	Worked up to June 2012
11	Meenakshi M	DTP Operator	✔	✔	✔	✔	✔	✔	✔	✔	✔	-	Working from Dec 2010
12	Sampath Kumar C	DTP Operator	-	-	-	✔	✔	✔	✔	✔	✔	-	Working From Jan 2013
13	Ashok Babu B A	DTP Operator	-	-	-	-	✔	✔	✔	✔	-	-	Worked From June 25th of 2014 upto Sep 2017
14	Manjunath S	Senior DTP Operator	-	-	-	-	✔	✔	✔	✔	✔	✔	Working Form June 25th of 2014
15	Ganesh Naik	Ass. DTP Operator	-	-	-	-	-	-	-	-	-	✔	Working Form Nov 2018

ನಿರ್ದೇಶಕರು (ಪ್ರ)

23/7/19